ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

ಅಧೀಕ್ಷಕ ಅಭಿಯಂತರವರ ಕಛೇರಿ, ದಾಸರಹಳ್ಳಿ ವಲಯ,
ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ಸಂಖ್ಯೆ: ಅ.ಅ.(ದಾ)/ತಾ.ಮ./~~63~~ 63 /2020-21 ದಿನಾಂಕ: 23/07/2020.

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ :- Solid Waste Management in Ward no 15 Dasarahalli (CC Camera) ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- **ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ:ಕಾ.ಪಾ.ಅ./ಆ.ಅ/102/2020-21, ದಿನಾಂಕ: 17.07.2020.**

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.30.00 ಲಕ್ಷಗಳ** ಮೊತ್ತಕ್ಕೆ ತಯಾರಿಸಿ, ಉಲ್ಲೇಖದಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸದರಿ Solid Waste Management in Ward no 15 Dasarahalli (CC Camera)ರ ಕಾಮಗಾರಿಯ ಅಂದಾಜು ಮೊತ್ತ **ರೂ.30.00 ಲಕ್ಷಗಳ** ಮೊತ್ತಕ್ಕೆ 2019-20ನೇ ಸಾಲಿನ ಆಯವ್ಯಯ P-3726ರಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಜಾಬ್ ಸಂಖ್ಯೆ 015-20-000085 ನೀಡಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ **ಕ್ರಮ ಸಂಖ್ಯೆ.63**, ಮತ್ತು **ಪುಟ ಸಂಖ್ಯೆ:-28**, ರಲ್ಲಿ ನೊಂದಾಯಿಸಿ **ರೂ.30.00 ಲಕ್ಷಗಳಿಗೆ** ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತುಗಳು :-

1. ಪ್ರಸ್ತಾಪಿತ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಠ ವಿವರಣೆ / ವಿಶಿಷ್ಟತೆ ಸ್ಥಳಕ್ಕೆ ಅನುಗುಣವಾಗಿರುವುದರ ಮತ್ತೊಮ್ಮೆ ಧೃಢೀಕರಿಸಿಕೊಳ್ಳುವುದು.
2. ಅಂದಾಜು ಪಟ್ಟಿಯಲ್ಲಿ ಅಳವಡಿಸಿ ಕೊಳ್ಳಲಗಿರುವ ಅಂಶಗಳಿಗೆ ಪ್ರಸಕ್ತ ಸಾಲಿನ / ಇತರೆ ದರಪಟ್ಟಿಯಲ್ಲಿ ದರಗಳು ಲಭ್ಯವಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು.
3. ಈ ವಾರ್ಡಿನಲ್ಲಿ ಈ ಹಿಂದೆ ಇದೇ ಕಾಮಗಾರಿಯನ್ನು (ಸಿಸಿ ಟಿವಿ ಕ್ಯಾಮೆರಾ) ಅಳವಡಿಸಿದ್ದಲ್ಲಿ, ಸಮರ್ಪಕವಾಗಿ ಉಪಯುಕ್ತತೆ / ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು ಹಾಗೂ ಅಳವಡಿಸಲಾಗಿರುವ ಸಿಸಿ ಕ್ಯಾಮೆರಾದ ಸ್ಥಳವನ್ನು ಪ್ರತ್ಯೇಕವಾದ ವಹಿಯಲ್ಲಿ ನಮೂದಿಸಿ ಧೃಢೀಕರಿಸಿ ಕೊಳ್ಳುವುದು.
4. ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Electronics Itemsಗಳು ಮಾರುಕಟ್ಟೆಯಲ್ಲಿ ಅನೇಕ ಮಾದರಿಯ ಅಂಶಗಳು ಲಭ್ಯವಿರುವುದರಿಂದ ಉತ್ತಮ ಗುಣಮಟ್ಟದ ಹಾಗೂ ಕಾರ್ಯಕ್ಷಮತೆಯುಳ್ಳ ಅಂಶಗಳನ್ನು ಆಯ್ಕೆ ಮಾಡಿ, ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸುವ ಮುನ್ನ ಕಾರ್ಯಪಾಲಕ ಅಭಿಯಂತರರು ರವರಿಂದ ಧೃಢೀಕರಣ ಪಡೆದ ನಂತರವೇ ಅನುಷ್ಠಾನಗೊಳಿಸುವ ಷರತ್ತಿಗೊಳಪಡಿಸಿದೆ.
5. ಸದರಿ ಅಂದಾಜುಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿರುವ ಎಲ್ಲಾ ಅಂಶಗಳಿಗೆ ದರಪಟ್ಟಿಯಲ್ಲಿ ದರಗಳು ಲಭ್ಯವಿಲ್ಲದಿರುವುದರಿಂದ ಸರ್ಕಾರಿ ಅಂಗಸಂಸ್ಥೆಯಾದ Ms. KEONICS ಸಂಸ್ಥೆಯವರಿಂದ ಸದರಿ ಅಂಶಗಳಿಗೆ ಮೂಲ ದರ (Base Rate) ಅನ್ನು ಪಡೆದು ಅದರಂತೆ, ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುವುದು ಕಂಡು ಬಂದಿದ್ದು, ಸದರಿ ದರಗಳು ಅಂದಾಜು ಪಟ್ಟಿ ತಯಾರಿಸಲು ಮಾತ್ರ ಸೀಮಿತಪಟ್ಟಿದ್ದು, ಇದರ ಅಂತಿಮ ದರಗಳನ್ನು ಟೆಂಡರ್ ನಲ್ಲಿ ನಮೂದಿಸಿರುವ / ನಿರ್ಣಹಿಸುವ ಕನಿಷ್ಠ ದರಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಪರಿಗಣಿಸುವ ಷರತ್ತಿಗೊಳಪಡಿಸಿದೆ.

ಪು.ತಿ.ನೋ

Scanned with CamScanner

6. ಈ ಕಾಮಗಾರಿಯಲ್ಲಿ ಉದ್ದೇಶಿಸಲಾಗಿರವ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿದ ನಂತರ ಪ್ರತ್ಯೇಕ ವಹಿಯಲ್ಲಿ ಎಲ್ಲಾ ಅಂಶಗಳನ್ನು ನಿಖರವಾದ ಸ್ಥಳದ ವರದಿಯೊಂದಿಗೆ ನಮೂದಿಸಿ, ಧೃಢೀಕರಿಸಿಕೊಂ ಷರತ್ತಿಗೊಳಪಡಿಸಿದೆ ಹಾಗೂ ಸದರಿ ಸಿಸಿ ಟಿವಿ ಕ್ಯಾಮೆರಾಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರ ಬಗ್ಗೆ ಸಂಬಂಧಪಟ್ಟ ಸಹಾಯಕ ಅಭಿಯಂತರರಿಂದ ಪ್ರತಿ ತಿಂಗಳು ಧೃಢೀಕರಣವನ್ನು ಪಡೆದು, ಇದನ್ನ ಕಾರ್ಯಪಾಲಕ ಅಭಿಯಂತರರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪರಿಶೀಲಿಸಿಕೊಳ್ಳುವ ಷರತ್ತಿಗೊಳಪಡಿಸಿದೆ.

7. ಸದರಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ, ಅನುಷ್ಠಾನಗೊಳಿಸಿದ ನಂತರ ಸದರಿ ಗುತ್ತಿಗೆದಾರರಿಂದಲೇ ವರ್ಷಗಳ ಕಾಲ ನಿರ್ವಹಣೆ ಮಾಡುವ ಷರತ್ತಿಗೊಳಪಡಿಸಿದೆ.

8. ಸದರಿ ಕಾಮಗಾರಿಯು ತೃಪ್ತಿಕರವಾಗಿ ಅನುಷ್ಠಾನಗೊಳಿಸಿರುವ ಬಗ್ಗೆ ಮೂರನೇ ವ್ಯಕ್ತಿಯ ತಪಾಸಣೆಯನ್ನು (Third Party Inspection) ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರ ಮಟ್ಟದಲ್ಲಿ ನಿರ್ಣಯ ಕೈಗೊಳ್ಳುವ ಷರತ್ತಿಗೊಳಪಡಿಸಿದೆ.

9. ಕಾಮಗಾರಿಯನ್ನು Indian Standard (I.S) ಮಾರ್ಗ ಸೂಚಿಗಳಂತೆ, ನಿಗಧಿತ ವಿಶಿಷ್ಟ ವಿವರಣೆ (Standard Specification) ಯಂತೆ ನಿರ್ವಹಿಸುವುದು ಹಾಗೂ ನಿಗಧಿಪಡಿಸಿರುವ ಪ್ರಯೋಗಗಳನ್ನು ಕೈಗೊಂಡು ಗುಣಮಟ್ಟವನ್ನು ಕಾಯ್ದುಕೊಂಡು ಕಾಮಗಾರಿಯನ್ನು ನಿರ್ವಹಿಸತಕ್ಕದ್ದು.

10. ನಿಗದಿಯಾದ ದರಪಟ್ಟಿಯಲ್ಲಿಲ್ಲದ ದರಗಳಿಗೆ (Data Rate) ಮತ್ತು ದರಗಳ ವಿವರಗಳಿಗೆ (Rate Analysis) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯ ತಕ್ಕದ್ದು ಹಾಗೂ ಅಂದಾಜಿನಲ್ಲಿ ನಮೂದಿಸಿರುವ ನಾನ್ ಎಸ್.ಆರ್.ಐಟಂಗಳನ್ನು Standard Specification ಪ್ರಕಾರ ಗುಣಾತ್ಮಕವಾಗಿ ನಿರ್ವಹಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

11. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಗಂಟು ರೂಪದಲ್ಲಿ ಒದಗಿಸಲಾಗಿರುವ (Lump Sum Provisions) ಮೊತ್ತಗಳಿಗೆ ಉಪಅಂದಾಜನ್ನು ತಯಾರಿಸಿ ಅನುಮೋದನೆ ಪಡೆಯ ತಕ್ಕದ್ದು.

12. ಪ್ರಸ್ತಾಪಿತ ಕಾಮಗಾರಿಗೆ ಸಂಬಂಧಿಸಿದ ನಕ್ಷೆಯಂತೆ ವಿನ್ಯಾಸಗಳನ್ನು ಪಡೆದು ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ.

13. ಕಂಡಿಕೆ ( )ರ ವರದಿಯನ್ವಯ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿ / ಡಿ.ಟಿ.ಎಸ್. ಗೆ ಅನುಮೋದನೆ ನೀಡಲಾಗಿದ್ದು,

14. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02/11/2017ರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಆ./ಪಿ.ಆರ್/5054/2017-18 ರಂತೆ ಕ್ರಮವಹಿಸುವುದು.

ಅಧೀಕ್ಷಕ ಅಭಿಯಂತರರು (ದಾಸರಹಳ್ಳಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಮುಖ್ಯ ಲೆಕ್ಕಾಧಿಕಾರಿಯವರ ಗಮನಕ್ಕೆ ಕಳುಹಿಸಿದೆ.
3. ಕಛೇರಿ ಕಡತಕ್ಕೆ.

Scanned with CamScanner